# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳಾದ ಶ್ರೀ ಎಸ್.ವ್ಹಿ. ಸಂಕನೂರ, ಶ್ರೀ ಪುಟ್ಟಣ್ಣ, ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್) ಹಾಗೂ ಶ್ರೀ ಎಸ್.ಎಲ್.ಭೋಜೇಗೌಡ ಇವರುಗಳು ನಿಯಮ, 72 ರಡಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಉತ್ತರ.

## ಸೂಚನೆ

ರಾಜ್ಯದ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ 'ಸಿ' ವೃಂದದಲ್ಲಿ ತಾಂತ್ರಿಕೇತರ ವಿಭಾಗದಲ್ಲಿ (Non-Technical) ಕಾರ್ಯನಿರ್ವಹಿಸುತ್ತಿರುವ ಸಹಾಯಕ ಉಪನ್ಯಾಸಕರು ಮತ್ತು ಸಿಸ್ಟಮ್ ಅನಲಿಸ್ಟ್ ಆದವರಿಗೆ (Commercial Practice and Fashion Design) A.I.C.T.E ವೇತನ ನೀಡಿ ಅದೇ "ಸಿ" ವೃಂದದಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಂಥಪಾಲಕರಿಗೆ A.I.C.T.E ವೇತನ ನೀಡದೆ ತಾರತಮ್ಯ ಮಾಡಿರುವ ಬಗ್ಗೆ.

## ಉತ್ತರ

ಸರ್ಕಾರದ ಆದೇಶ ಸಂಖ್ಯೆ: ಇಡಿ 79 ಡಿಟಿಇ 1991ರನ್ವಯ ಕೆಲವು ನಿಬಂಧನೆಗಳು ಹಾಗೂ ಷರತ್ತುಗಳಿಗೆ ಒಳಪಟ್ಟಂತೆ ಸರ್ಕಾರಿ ಮತ್ತು ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಗಳ ಇಂಜಿನಿಯರಿಂಗ್, ಮಾನವಶಾಸ್ತ್ರ ಹಾಗೂ ವಿಜ್ಞಾನ ವಿಷಯಗಳ ಅಧ್ಯಾಪಕರಿಗೆ ಎಐಸಿಟಿಇ ವೇತನ ಶ್ರೇಣಿಯನ್ನು ಮೊದಲ ಬಾರಿಗೆ ದಿನಾಂಕ: 01.04.1993 ರಿಂದ ಜಾರಿಗೊಳಿಸಲಾಗಿದೆ.

ಸದರಿ ಆದೇಶದನ್ವಯ 'ಬಿ' ವೃಂದದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಧ್ಯಾಪಕರಿಗೆ ಮಾತ್ರ ಎಐಸಿಟಿಇ ವೇತನ ಶ್ರೇಣಿಯನ್ನು ವಿಸ್ತರಿಸಲಾಗಿದೆ. 'ಸಿ' ವೃಂದದ ಹುದ್ದೆಗಳಿಗೆ ಎಐಸಿಟಿಇ ವೇತನ ಶ್ರೇಣಿಯನ್ನು ವಿಸ್ತರಿಸಲು ಅವಕಾಶ ಕಲ್ಪಿಸಲಾಗಿಲ್ಲ. ಅದರಂತೆ ಪಾಲಿಟೆಕ್ನಿಕ್ ಸಂಸ್ಥೆಗಳ ಗ್ರಂಥಪಾಲಕರು ಹಾಗೂ ಸಿಸ್ಟಂ ಅನಾಲಿಸ್ಟ್ ಹುದ್ದೆಗಳು 'ಸಿ' ವೃಂದದ ರಾಜ್ಯ ವೇತನ ಶ್ರೇಣಿಯ ಹುದ್ದೆಗಳಾಗಿದ್ದು, ಅವರಿಗೆ ಎಐಸಿಟಿಇ ವೇತನ ಶ್ರೇಣಿಗಳು ಅನ್ವಯವಾಗುವುದಿಲ್ಲ.

ಮುಂದುವರೆದು, ಪಾಲಿಟೆಕ್ನಿಕ್ ಸಂಸ್ಥೆಗಳ ಬೋಧಕ ವೃಂದದವರಿಗೆ ಕಾಲಕಾಲಕ್ಕೆ ಎಐಸಿಟಿಇ ವೇತನ ಶ್ರೇಣಿಗಳನ್ನು ಪರಿಷ್ಕರಿಸಿರುವ ಸರ್ಕಾರದ ಆದೇಶಗಳಲ್ಲಿ ಎಐಸಿಟಿಇ ವೇತನ ಶ್ರೇಣಿಗಳು ಕೆಳಕಂಡ ಹುದ್ದೆಗಳಿಗೆ ಮಾತ್ರ ಅನ್ವಯವಾಗುತ್ತವೆ ಎಂದು ಸ್ಪಷ್ಟಪಡಿಸಲಾಗಿದೆ:

**Coverage:**
The AICTE Scales of Pay and Scheme thereto applies only to the teachers of Government and Aided Polytechnics / Institutions in the State in Engineering subjects, Humanities and Science.

**Applicability of the Scheme:**

i. The Government shall not extend the AICTE pay scales to any of its employees except those having coverage under these orders.
ii. This scheme does not extend to the posts of professionals like System Analysts, Senior Analysts, Research Officers, etc.

ಅದರಂತೆ 1986, 1996, 2006 ಮತ್ತು 2016 ರ ಎಐಸಿಟಿಇ ವೇತನ ಪರಿಷ್ಕರಣೆಗಳಲ್ಲಿ ಸಹ ಪಾಲಿಟೆಕ್ನಿಕ್ ಸಂಸ್ಥೆಗಳ ಅಧ್ಯಾಪಕ ವೃಂದದ ಉಪನ್ಯಾಸಕರಿಗೆ ("B Group Teaching Cadre") ಮಾತ್ರ ಎಐಸಿಟಿಇ ವೇತನ ಶ್ರೇಣಿಗಳನ್ನು ವಿಸ್ತರಿಸಲಾಗಿದೆ. ಸಿಸ್ಟಂ ಅನಾಲಿಸ್ಟ್ ಹಾಗೂ ಗ್ರಂಥಪಾಲಕರ ಹುದ್ದೆಗಳಿಗೆ ಎಐಸಿಟಿಇ ವೇತನ ಶ್ರೇಣಿಗಳನ್ನು ವಿಸ್ತರಿಸುವುದಾಗಿ ಯಾವುದೇ ಆದೇಶಗಳಲ್ಲಿ ಉಲ್ಲೇಖಿಸಿರುವುದಿಲ್ಲ.

ಇದಲ್ಲದೆ, ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು (AICTE) ಕಾಯ್ದೆ 1987ರ ಸೆಕ್ಷನ್ 23(1) ಹಾಗೂ 10(1)(v) ಅನ್ವಯ ಎಐಸಿಟಿಇ ರೆಗ್ಯುಲೇಶನ್ 2010 ಜಾರಿಗೆ ತರಲಾಗಿದ್ದು, ಅದರ ಪ್ರಕಾರವೂ ಈ ಯೋಜನೆ ಸಿಸ್ಟಂ ಅನಾಲಿಸ್ಟ್ ಮುಂತಾದ ವೃತ್ತಿಪರ ಹುದ್ದೆಗಳಿಗೆ ಅನ್ವಯವಾಗುವುದಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ.

i. The implementation of the revised scales shall be subject to the acceptance of all the conditions mentioned in this letter as well as regulations to be framed by the AICTE in this label.
ii. This scheme does not extend to the posts of professionals like systems Analysts, etc.

ಈ ಹಿನ್ನೆಲೆಯಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿನ ಉಪನ್ಯಾಸಕರನ್ನು ಹೊರತುಪಡಿಸಿ ಸಹಾಯಕ ಉಪನ್ಯಾಸಕರು, ಸಿಸ್ಟಂ ಅನಾಲಿಸ್ಟ್ ಹಾಗೂ ಗ್ರಂಥಪಾಲಕರ ಹುದ್ದೆಗಳಿಗೆ ಎಐಸಿಟಿಇ ವೇತನ ಶ್ರೇಣಿಗಳನ್ನು ಮಂಜೂರು ಮಾಡಿರುವುದಿಲ್ಲ.

ಆದರೆ, ಎಐಸಿಟಿಇ ನವದೆಹಲಿ ಪತ್ರ ಸಂಖ್ಯೆ:F.No.FD/PSSC/2003-04/136 ದಿನಾಂಕ:15.04.2005ರ ಆಧಾರದ ಮೇಲೆ ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಇಬ್ಬರು ಸಿಸ್ಟಂ ಅನಾಲಿಸ್ಟ್‌ಗಳಿಗೆ ಸರ್ಕಾರದ ಆದೇಶ ಸಂಖ್ಯೆ:ಇಡಿ 62 ಡಿಟಿಇ 2007, ದಿನಾಂಕ: 04.02.2009ರಲ್ಲಿ ಎಐಸಿಟಿಇ ವೇತನ ಶ್ರೇಣಿಯನ್ನು ವಿಸ್ತರಿಸಲಾಗಿತ್ತು. ನಂತರ ಸದರಿ ಹುದ್ದೆಗೆ ಎಐಸಿಟಿಇ ವೇತನ ಶ್ರೇಣಿಯನ್ನು ವಿಸ್ತರಿಸಲು ಅವಕಾಶವಿಲ್ಲವೆಂಬುದನ್ನು ಮನಗಂಡು, ತಾಂತ್ರಿಕ ಶಿಕ್ಷಣ ನಿರ್ದೇಶಕರ ಆದೇಶ ಸಂಖ್ಯೆ: ಡಿಟಿಇ 44 ಇಎಸ್‌ಟಿ 1(ಬಿ) 2005-06 ದಿನಾಂಕ:19.05.2017ರಲ್ಲಿ ಆ ಇಬ್ಬರು ಸಿಸ್ಟಂ ಅನಾಲಿಸ್‌ಟ್‌ಗಳಿಗೆ ವಿಸ್ತರಿಸಲಾಗಿದ್ದ ಎಐಸಿಟಿಇ ವೇತನ ಶ್ರೇಣಿಯನ್ನು ಹಿಂಪಡೆಯಲಾಗಿದೆ.

ಇದನ್ನು ಪ್ರಶ್ನಿಸಿ ಸಂಬಂಧಿತ ಸಿಬ್ಬಂದಿಗಳು ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಅರ್ಜಿ ಸಂಖ್ಯೆ:3235-36/2017 ಅನ್ನು ಸಲ್ಲಿಸಿದ್ದು, ದಿನಾಂಕ:14.01.2020 ರಂದು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ನೀಡಿರುವ ತೀರ್ಪನ್ನು ಪ್ರಶ್ನಿಸಿ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:2074/2021 ನ್ನು ದಾಖಲಿಸಲಾಗಿದೆ. ಪ್ರಕರಣವು ಮಾನ್ಯ ನ್ಯಾಯಾಲಯದ ವಿಚಾರಣೆಯಲ್ಲಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ, ಎಐಸಿಟಿಇ ನಿಯಮಗಳು ಹಾಗೂ ರಾಜ್ಯ ಸರ್ಕಾರದ ಆದೇಶಗಳ ಪ್ರಕಾರ ಬೋಧಕ ವೃಂದದ ಗ್ರೂಪ್-ಬಿ ಉಪನ್ಯಾಸಕರ ಹುದ್ದೆಗಳಿಗೆ ಮಾತ್ರ ಎಐಸಿಟಿಇ ವೇತನ ಶ್ರೇಣಿಯನ್ನು ಮಂಜೂರು ಮಾಡಲು ಅವಕಾಶವಿದೆ. ತಾಂತ್ರಿಕ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಗ್ರಂಥಪಾಲಕರ ಹುದ್ದೆಯು ಗ್ರಂಥಾಲಯ ನಿರ್ವಹಣೆಗೆ ಮಂಜೂರಾಗಿರುವ 'ಸಿ' ವೃಂದದ ರಾಜ್ಯ ವೇತನ ಶ್ರೇಣಿಯ ಬೋಧಕೇತರ ಹುದ್ದೆಯಾಗಿರುವುದರಿಂದ ಅವರಿಗೆ ಎಐಸಿಟಿಇ ವೇತನ ಶ್ರೇಣಿಯನ್ನು ನೀಡಲು ನಿಯಮಗಳಲ್ಲಿ ಅವಕಾಶ ಇರುವುದಿಲ್ಲ.

**ಸಂಖ್ಯೆ:ಇಡಿ 33 ಟಿಪಿಇ 2026**

**(ಡಾ. ಎಂ.ಸಿ. ಸುಧಾಕರ್)**
ಉನ್ನತ ಶಿಕ್ಷಣ ಸಚಿವರು